# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3**

ಸಂಖ್ಯೆ:ಎ8/ಅಧಿಸೂಚನೆ/ಪ್ರ.ಪತ್ರ/ಜೂನ್-18/12/2018-19 ದಿನಾಂಕ:08.06.2018

**<u>ತುರ್ತಾಗಿ ಮತ್ತು ಕಡ್ಡಾಯವಾಗಿ ಪರಿಶೀಲಿಸುವುದು</u>**

## ಸುತ್ತೋಲೆ

ವಿಷಯ:-2018 ಜೂನ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪ್ರವೇಶ ಪತ್ರ ಪರಿಶೀಲನೆ ಕುರಿತು.

******

2018ರ ಜೂನ್ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗೆ ನಿಮ್ಮ ಶಾಲೆಯಿಂದ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು SATS ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸದರಿ ಪ್ರವೇಶ ಪತ್ರಗಳನ್ನು ನಿಮ್ಮ ಶಾಲೆಯಿಂದ ಕಳುಹಿಸಲಾದ ಎಂ.ಎಸ್.ಎ. ಹಾಗೂ ನಾಮಿನಲ್ ರೋಲ್‌ನಲ್ಲಿನ ಮಾಹಿತಿಯಂತೆ ಪ್ರವೇಶ ಪತ್ರಗಳನ್ನು ಅಪ್‌ಲೋಡ್ ಮಾಡಲಾಗಿದೆ. ನಿಮ್ಮ ಶಾಲೆಗೆ ಸಂಬಂಧಪಟ್ಟ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು SATS ಜಾಲತಾಣದಲ್ಲಿ SATS ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಬಳಸಿ ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳುವುದು. ಸದರಿ ಪ್ರವೇಶ ಪತ್ರಗಳಲ್ಲಿ ಯಾವುದೇ ತಪ್ಪುಗಳಿಲ್ಲದಿರುವ ಬಗ್ಗೆ ಈ ಕೆಳಕಂಡ ಅಂಶಗಳಂತೆ ಪರಿಶೀಲಿಸುವುದು. ಒಂದು ವೇಳೆ ಏನಾದರೂ ತಪ್ಪುಗಳು ಕಂಡು ಬಂದಲ್ಲಿ ಕೂಡಲೇ ಮಂಡಳಿಯ ಸಂಬಂಧಿಸಿದ ಶಾಖಾಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಿಕೊಳ್ಳುವುದು.

1. ನಿಮ್ಮ ಶಾಲೆಯಿಂದ ಕಳುಹಿಸಿದ CCERR/CCEPR/NSR/NSPR ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರ ನಿಮ್ಮ ಶಾಲೆಯಲ್ಲಿ ಸ್ವೀಕೃತವಾದ ಪ್ರವೇಶ ಪತ್ರಗಳ ಸಂಖ್ಯೆಗಳು ಸರಿ ಹೊಂದುತ್ತಿವೆಯೆ? ಒಂದು ವೇಳೆ ಸರಿ ಹೊಂದದಿದ್ದಲ್ಲಿ ಯಾವ ಅಭ್ಯರ್ಥಿಯ ಪ್ರವೇಶ ಪತ್ರ ಬಂದಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಅಗತ್ಯ ಕ್ರಮಕ್ಕಾಗಿ ಸಮರ್ಥನೆಯೊಂದಿಗೆ/ ದಾಖಲೆಗಳನ್ನು ಕಳುಹಿಸಿಕೊಡುವುದು.
2. ಅಭ್ಯರ್ಥಿಗಳ ಭೌತಿಕ ಸ್ಥಿತಿಯನ್ನು ಪರಿಶೀಲಿಸಿ, ಭಾಷಾ ಸಂಯೋಜನೆ ವಿನಾಯಿತಿ ಪಡೆಯುತ್ತಿದ್ದಲ್ಲಿ. ದೃಢೀಕರಣ ಮತ್ತು ಸಮರ್ಥನೆಯೊಂದಿಗೆ ಸರಿಪಡಿಸಲು ಪರಿಶೀಲನಾ ಶಾಖೆಗೆ ಕಳುಹಿಸಿಕೊಡುವುದು.
3. ಶಾಲಾ ಸಂಕೇತದಲ್ಲಿ ಹಾಗೂ ಶಾಲೆಯ ಹೆಸರಿನಲ್ಲಿ ಏನಾದರೂ ವ್ಯತ್ಯಾಸ ಕಂಡುಬರುತ್ತಿದ್ದಲ್ಲಿ ಸಮರ್ಥನೆಯೊಂದಿಗೆ ಸರಿಪಡಿಸಲು ಪರಿಶೀಲನಾ ಶಾಖೆಗೆ ಕಳುಹಿಸಿಕೊಡುವುದು.
4. ನಿಮ್ಮ ಶಾಲೆಯಿಂದ ಮಂಡಳಿಗೆ ಭರ್ತಿಮಾಡಿ ಕಳುಹಿಸಲಾದ ಎಂ.ಎಸ್.ಎ. ಹಾಗೂ ನಾಮಿನಲ್ ರೋಲ್‌ನಲ್ಲಿ ಇದ್ದಂತೆ ವಿದ್ಯಾರ್ಥಿಗಳ ಭಾವಚಿತ್ರವನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಲಾಗಿದೆ. ಒಂದು ವೇಳೆ ಯಾವುದೇ ವಿದ್ಯಾರ್ಥಿಯ ಸಹಿ ಇಲ್ಲದೆ ಮುದ್ರಿತವಾಗಿರುವ ಪ್ರವೇಶಪತ್ರ ಇದ್ದಲ್ಲಿ ಸಂಬಂಧಿಸಿದ ವಿದ್ಯಾರ್ಥಿಯ ಭಾವಚಿತ್ರವನ್ನು ಶಾಲಾ ಮುಖ್ಯಸ್ಥರು ಅಂಟಿಸಿ ದೃಢೀಕರಿಸಿ ವಿದ್ಯಾರ್ಥಿಯ ಸಹಿ ಮಾಡಿಸಿ ಅನಂತರ ಪ್ರವೇಶ ಪತ್ರ ವಿತರಿಸುವುದು ಕಡ್ಡಾಯವಾಗಿರುತ್ತದೆ. ಇಂತಹ ವಿದ್ಯಾರ್ಥಿ ಭಾವಚಿತ್ರ ಅಂಟಿಸಿರುವ ಮತ್ತು ವಿದ್ಯಾರ್ಥಿಯ ಸಹಿ ಮಾಡಿರುವ ಪ್ರವೇಶ ಪತ್ರದ ಪ್ರತಿಯನ್ನು ಪರೀಕ್ಷಾ ಮಂಡಳಿಯ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಕಳುಹಿಸುವುದು. ಸದರಿ ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾಗುವ ಪರೀಕ್ಷಾ ಕೇಂದ್ರದಲ್ಲಿ ಇರುವ ಕೇಂದ್ರ ನಾಮಪಟ್ಟಿಯಲ್ಲಿಯೂ ಸಹ ಸದರಿ ವಿದ್ಯಾರ್ಥಿ ಭಾವಚಿತ್ರವನ್ನು ಶಾಲಾ ಮುಖ್ಯಸ್ಥರೇ ಖುದ್ದು ಅಂಟಿಸಿ ದೃಢೀಕರಿಸುವುದು. ಪ್ರವೇಶ ಪತ್ರದಲ್ಲಿ ಹಾಗೂ ಕೇಂದ್ರ ನಾಮಪಟ್ಟಿಯಲ್ಲಿ ಭಾವಚಿತ್ರ

ಇಲ್ಲದೇ ಇರುವ ವಿದ್ಯಾರ್ಥಿಯನ್ನು ಪರೀಕ್ಷೆ ಬರೆಯಲು ಅನುಮತಿಸಲಾಗುವುದಿಲ್ಲ. ಇದರಿಂದ ವಿದ್ಯಾರ್ಥಿಗೆ ಆಗುವ ತೊಂದರೆಗೆ ಸಂಬಂಧಿಸಿದ ಶಾಲಾ ಮುಖ್ಯಸ್ಥರೇ ಜವಾಬ್ದಾರರಾಗಿದ್ದು, ಮಂಡಳಿಯು ಇದರ ಜವಾಬ್ದಾರಿ ಹೊರುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಮಂಡಳಿಯ ಪ್ರವೇಶ ಪತ್ರದಲ್ಲಿರುವ ಭಾಷಾ ಸಂಯೋಜನೆ ಮಾಧ್ಯಮದಂತೆಯೇ ಪರೀಕ್ಷೆ ನಡೆಸಬೇಕು. ಪ್ರವೇಶ ಪತ್ರ ಹೊರತುಪಡಿಸಿ, ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ಭಾಷೆ ಮತ್ತು ಮಾಧ್ಯಮ ಬದಲಾವಣೆಗೆ ಅವಕಾಶವಿಲ್ಲ. ಬದಲಾವಣೆ ಮಾಡಿದಲ್ಲಿ ಅಂತಹ ಮುಖ್ಯ ಅಧೀಕ್ಷಕರು ಮತ್ತು ಶಿಕ್ಷಕರ ಮೇಲೆ ಶಿಸ್ತಿನ ಕ್ರಮ ವಹಿಸಲಾಗುವುದು.

5. ಯಾವುದೇ ವಿದ್ಯಾರ್ಥಿಯ ಭಾವಚಿತ್ರ ಬದಲಾವಣೆಗೆ ಸಂಬಂಧಿಸಿದಂತೆ, ಪ್ರವೇಶ ಪತ್ರದಲ್ಲಿ ಹಾಗೂ ಕೇಂದ್ರ ನಾಮಪಟ್ಟಿಯಲ್ಲಿ ಕ್ರಮ ಸಂಖ್ಯೆ:04 ರಲ್ಲಿ ತಿಳಿಸಿದ ಕಾರಣಗಳಿಗಾಗಿ ಪರೀಕ್ಷೆಗೆ ಮುಂಚೆ ಮಾಡಲಾದ ಬದಲಾವಣೆಗಳನ್ನು ಪರೀಕ್ಷಾ ಮಂಡಳಿಯು ಪರಿಗಣಿಸುತ್ತದೆ. ಕೇಂದ್ರ ನಾಮಪಟ್ಟಿಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡದೆ ಇದ್ದಲ್ಲಿ ನಾಮಪಟ್ಟಿಯಲ್ಲಿರುವ ಭಾವಚಿತ್ರದ ವಿದ್ಯಾರ್ಥಿಯೇ ನೈಜ ವಿದ್ಯಾರ್ಥಿ ಎಂದು ಪರಿಗಣಿಸಲಾಗುವುದು. ಪರೀಕ್ಷಾ ನಂತರದಲ್ಲಿ ಬರುವ ವಿದ್ಯಾರ್ಥಿಗಳ ಭಾವಚಿತ್ರ ಬದಲಾವಣೆ ಕುರಿತು ಯಾವುದೇ ಮನವಿಗಳನ್ನು ಮಂಡಳಿಯು ಪುರಸ್ಕರಿಸುವುದಿಲ್ಲ. ಇದಕ್ಕೆ ಸಂಬಂಧಿಸಿದ ಶಾಲಾ ಮುಖ್ಯಸ್ಥರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರುಗಳು ನೇರ ಜವಾಬ್ದಾರರಾಗಿರುತ್ತಾರೆ. ಇಂತಹ ಪ್ರಕರಣಗಳಲ್ಲಿ **ಬದಲಿ ಅಭ್ಯರ್ಥಿ ಪರೀಕ್ಷೆ ಬರೆಯಲು ಸಹಕರಿಸಿ ಪರೀಕ್ಷಾ ಅವ್ಯವಹಾರದಲ್ಲಿ ಭಾಗಿಯಾಗಿರುತ್ತೀರೆಂದು ಪರಿಗಣಿಸಿ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರ ಮತ್ತು ಶಾಲಾ ಮುಖ್ಯಸ್ಥರ ಮೇಲೆ ಕೆ.ಸಿ.ಎಸ್.ಆರ್.(ಸಿಸಿಎ) ನಿಯಮ-1957 ಮತ್ತು 1983ರ ಕರ್ನಾಟಕ ಶಿಕ್ಷಣ ಕಾಯ್ದೆ ಅಧಿನಿಯಮಗಳನ್ವಯ ಕ್ರಮ ಜರುಗಿಸಲಾಗುವುದು.**

6. ಅಭ್ಯರ್ಥಿಗಳ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮದಿನಾಂಕ, ಮಾಧ್ಯಮ ಪರೀಕ್ಷೆಗೆ ತೆಗೆದುಕೊಳ್ಳುವ ವಿಷಯಗಳು, ವಿದ್ಯಾರ್ಥಿಯ ವಿವರ, ಲಿಂಗದ ಮತ್ತು ಪರೀಕ್ಷಾ ಕೇಂದ್ರದ ಸಂಪೂರ್ಣ ವಿವರಗಳು ಪ್ರವೇಶ ಪತ್ರದಲ್ಲಿ ಮುದ್ರಣವಾಗಿದ್ದು, ಸದರಿ ಮಾಹಿತಿಗಳು ತಪ್ಪಾಗಿದ್ದಲ್ಲಿ, ಮುಖ್ಯವಾಗಿ ಜನ್ಮ ದಿನಾಂಕ ಮತ್ತು ಸ್ಪೆಲಿಂಗ್‌ನಲ್ಲಿನ ತಪ್ಪುಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ದೃಢೀಕರಿಸಿ, ಸರಿಪಡಿಸಲು ಪರಿಶೀಲನಾ ಶಾಖೆಗೆ ಕಳುಹಿಸಿಕೊಡುವುದು. ಈ ರೀತಿ ತಿದ್ದುಪಡಿಗೆ ಕಳುಹಿಸಿದ ಪ್ರವೇಶ ಪತ್ರಗಳನ್ನು ಮಂಡಳಿಯಲ್ಲಿನ ದಾಖಲೆಗಳೊಂದಿಗೆ ಪರಿಶೀಲಿಸಿ ಸರಿಪಡಿಸಲಾಗುವುದು.

7. ಪ್ರವೇಶ ಪತ್ರಗಳಲ್ಲಿನ ತಿದ್ದುಪಡಿಗಳನ್ನು ಕೆಂಪು ಶಾಯಿಯಲ್ಲಿಯೇ ಮಾಡಿ ದೃಢೀಕರಿಸಲು ತಿಳಿಸಿದೆ.

8. 2018ರ ಜೂನ್ ಪೂರಕ ಪರೀಕ್ಷೆಯ ವೇಳಾಪಟ್ಟಿಯಂತೆ ಪರೀಕ್ಷೆಗೆ ಸಕಾಲದಲ್ಲಿ ಹಾಜರಾಗಲು ಸಂಬಂಧಿಸಿದ ಅಭ್ಯರ್ಥಿಗಳಿಗೆ/ಪೋಷಕರಿಗೆ ಮನವರಿಕೆ ಮಾಡಲು ಮುಖ್ಯಶಿಕ್ಷಕರಿಗೆ ತಿಳಿಸಿದೆ.

9. ಯಾವುದೇ ಕಾರಣಕ್ಕೂ (Shortage of attendance) ಹಾಜರಾತಿ ಕೊರತೆಯಿರುವ ವಿದ್ಯಾರ್ಥಿಗೆ ಪರೀಕ್ಷೆಗೆ ಅವಕಾಶ ನೀಡಬಾರದು.

10. ಪ್ರವೇಶ ಪತ್ರದಲ್ಲಿ ನೀಡಲಾಗಿರುವ ಸೂಚನೆಗಳನ್ನು ಪಾಲಿಸಲು ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾಹಿತಿಯನ್ನು ನೀಡುವುದು.

11. ಅಭ್ಯರ್ಥಿಗಳ ಪ್ರಯತ್ನಗಳ ಸಂಖ್ಯೆ ಹಾಗೂ ರೆಗ್ಯುಲರ್ / ಖಾಸಗಿ ಅಭ್ಯರ್ಥಿಗಳ ಆಧಾರದ ಮೇಲೆ ಪ್ರವೇಶ ಪತ್ರಗಳಲ್ಲಿ ಪ್ರಶ್ನೆ ಪತ್ರಿಕೆಯ ವಿಧವನ್ನು ನಮೂದಿಸಲಾಗಿದೆ. ಈ ಬಗ್ಗೆ ಮುಖ್ಯ ಶಿಕ್ಷಕರು ಗಮನಿಸಿ ಖಾತರಿಪಡಿಸಿಕೊಳ್ಳುವುದು. ಹಾಗೂ ಈ ಬಗ್ಗೆ ಅಭ್ಯರ್ಥಿಗಳಿಗೆ ಮನವರಿಕೆ ಮಾಡಲು ಕ್ರಮವಹಿಸುವುದು.

12. ಪ್ರವೇಶ ಪತ್ರದಲ್ಲಿ ಪರೀಕ್ಷೆಗೆ ಹಾಜರಾಗುವ ವಿಷಯದ ಮುಂದೆ ಪ್ರಶ್ನೆಪತ್ರಿಕೆ ವಿಧದ Version (A,B,C,D) ನನ್ನು ನಮೂದಿಸಿದೆ. ವಿದ್ಯಾರ್ಥಿಗಳಿಗೆ ಅದೇ ವಿಷಯದ, ಅದೇ Version ಪ್ರಶ್ನೆ ಪತ್ರಿಕೆಯನ್ನು ಅಭ್ಯರ್ಥಿಗಳಿಗೆ ವಿತರಿಸಲು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರಿಗೆ ಸೂಕ್ತ ತರಬೇತಿಯನ್ನು ನೀಡುವುದು.

13. NSR ಅಭ್ಯರ್ಥಿಗಳು ಈ ಮೊದಲು ಸಾಮಾನ್ಯ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗುತ್ತಿದ್ದು, ಜೂನ್-2018ರ ಪೂರಕ ಪರೀಕ್ಷೆಯಿಂದ ಆಡಳಿತ ಹಾಗೂ ತಾಂತ್ರಿಕ ಕಾರಣಾಂತರಗಳಿಂದ ಜಿಲ್ಲಾ ಖಾಸಗಿ

ಪರೀಕ್ಷಾ ಕೇಂದ್ರಗಳಿಗೆ ಸೇರ್ಪಡೆ ಮಾಡಲಾಗಿದೆ. ಶಾಲಾ ಮುಖ್ಯ ಶಿಕ್ಷಕರು ಸಂಬಂಧಿಸಿದ ಅಭ್ಯರ್ಥಿಗಳಿಗೆ ಮಾಹಿತಿಯನ್ನು ನೀಡುವುದು.

14. ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು, ಪ್ರವೇಶ ಪತ್ರದಲ್ಲಿ ಪರೀಕ್ಷೆಗೆ ಹಾಜರಾಗುವ ವಿಷಯದ ಮುಂದೆ ನಮೂದಿಸಿರುವ ಪ್ರಶ್ನೆ ಪತ್ರಿಕೆ Version (A,B,C,D) ನನ್ನು ಖಾತರಿ ಪಡಿಸಿಕೊಳ್ಳುವುದು. ಅದೇ ವಿಷಯದ ಪ್ರಶ್ನೆ ಪತ್ರಿಕೆಯ, ಅದೇ Version ನಮೂದಿಸಿರುವ ಪ್ರಶ್ನೆ ಪತ್ರಿಕೆಯನ್ನು ಸ್ವೀಕರಿಸಲಾಗಿದೆಯೇ ಎಂಬುದನ್ನು ಅಭ್ಯರ್ಥಿಗಳು ಪರಿಶೀಲಿಸಿಕೊಳ್ಳುವುದು. ಈ ಸಂಬಂಧ ಶಾಲಾ ಮುಖ್ಯೋಪಾಧ್ಯಾಯರು ಅಭ್ಯರ್ಥಿಗಳಿಗೆ ಮಾಹಿತಿ ನೀಡುವುದು.

ಈ ಮೇಲ್ಕಂಡ ಅಂಶಗಳಂತೆ ನಿಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆದ್ಯತೆ ಮೇರೆಗೆ ಕಡ್ಡಾಯವಾಗಿ ಪರಿಶೀಲಿಸಿ, ಕ್ರೋಢೀಕರಿಸಿ, ತಿದ್ದುಪಡಿಗಳಿದ್ದಲ್ಲಿ ಪಟ್ಟಿ ಮಾಡಿ ನಮೂದಿಸಿ, ಸರಿಪಡಿಸಲು ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಮಂಡಳಿಯ ಪರಿಶೀಲನಾಧಿಕಾರಿಗಳಿಗೆ ಪ್ರವೇಶ ಪತ್ರವನ್ನು ಮಂಡಳಿಯಿಂದ ಅಪ್‌ಲೋಡ್ ಮಾಡಿದ ಮೂರು ದಿನಗಳ ಒಳಗೆ ತಲುಪುವಂತೆ ಕಳುಹಿಸಿಕೊಡುವುದು. ಪ್ರವೇಶ ಪತ್ರದಲ್ಲಿರುವ ಮಾಹಿತಿಗಳ ತಿದ್ದುಪಡಿಗಳಿಗೆ ಜೆರಾಕ್ಸ್ ಪ್ರತಿಯನ್ನು ಸಲ್ಲಿಸುವುದು. ನಂತರ ತಿದ್ದುಪಡಿಗಾಗಿ ಬರುವ ಯಾವುದೇ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

(ವಿ. ಸುಮಂಗಲ)
ನಿರ್ದೇಶಕರು, ಪರೀಕ್ಷೆಗಳು

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ನೋಡಲ್ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಪ್ರೌಢ ಶಾಲಾ ಮುಖ್ಯಶಿಕ್ಷಕರುಗಳಿಗೆ ಅಗತ್ಯಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ).
3. ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ ಅಗತ್ಯಕ್ರಮಕ್ಕಾಗಿ (ಪರಿಶೀಲನಾ ಶಾಖೆಗಳ ಮೂಲಕ).
4. ಉಪನಿರ್ದೇಶಕರು(ಆಡಳಿತ), ಕಪ್ರೌಶಿಪ ಮಂಡಳಿ ಇವರ ಮಾಹಿತಿಗಾಗಿ.
5. ಶಾಖಾಧಿಕಾರಿಗಳು, ಬಿ–ಶಾಖೆ.
6. ಶಾಖಾಧಿಕಾರಿಗಳು, ಸಿ–ಶಾಖೆ.
7. ಶಾಖಾಧಿಕಾರಿಗಳು ಗಣಕ ಶಾಖೆ ಇವರಿಗೆ ಈ ಸುತ್ತೋಲೆಯನ್ನು ಅಂತರ್ ಜಾಲದಲ್ಲಿ ಪ್ರಕಟಿಸುವುದು.
8. ನಿರ್ದೇಶಕರು/ಕಾರ್ಯದರ್ಶಿಗಳ ಆಪ್ತ ಶಾಖೆಯ ಮಾಹಿತಿಗಾಗಿ.
9. ಮಂಡಳಿಯ ಎಲ್ಲಾ ಶಾಖಾಧಿಕಾರಿಗಳು ಮತ್ತು ಅಧೀಕ್ಷಕರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
10. ಕಛೇರಿ ಪ್ರತಿ.

ಜೂನ್–2018ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ತಿದ್ದುಪಡಿ ಮಾಡಲಾದ ಪ್ರವೇಶ ಪತ್ರಗಳ ಪ್ರತಿಗಳನ್ನು ರವಾನಿಸಬೇಕಾದ ಅಧಿಕಾರಿಗಳ ಹೆಸರು ಮತ್ತು ಸಂಬಂಧಿಸಿದ ಜಿಲ್ಲೆಗಳ ಮಾಹಿತಿ.

| ಕ್ರ ಸಂ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ | ಕಛೇರಿಯ ದೂರವಾಣಿ |
|---|---|---|---|---|---|
| 1 | ಎಫ್ | ಸಂಧ್ಯಾ ಎಂ ಪಾಟೀಲ್ ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ | 9341677111 | 08023345579 / 08023344676 |
| 2 | ಜಿ | ಎಂ.ವಿ.ಕುಮಾರಿ ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ | 8762404243 | 08023345579 / 08023344676 |
| 3 | ಹೆಚ್ | ಎಂ.ಎನ್.ಶ್ರೀನಿವಾಸ್ ಸಹಾಯಕ ನಿರ್ದೇಶಕರು | ಚಿತ್ರದುರ್ಗ/ದಾವಣಗೆರೆ/ಬೆಂಗಳೂರು ಗ್ರಾಮಾಂತರ/ರಾಮನಗರ | 9449052591 | 08023345579 / 08023344676 |
| 4 | ಐ | ಎಂ.ಜಿ.ಜಯಪ್ರಕಾಶ್, ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9845401773 | 08023345579 / 08023344676 |
| 5 | ಜೆ | ಎಂ.ಎನ್.ಶ್ರೀನಿವಾಸ್ ಸಹಾಯಕ ನಿರ್ದೇಶಕರು | ಮೈಸೂರು/ ಹಾಸನ/ ಚಿಕ್ಕಮಗಳೂರು/ ಕೊಡಗು | 9449052591 | 08023345579 / 08023344676 |
| 6 | ಕೆ | ಸೀತಾಲಕ್ಷ್ಮೀ, ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ | 9480590754 | 08023345579 / 08023344676 |
| 7 | ಎಲ್ | ಚಂದ್ರಕಾಂತಮ್ಮ, ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 8971124869 | 08023345579 / 08023344676 |
| 8 | ಎಂ | ಎಸ್. ಎನ್ ವೆಂಕೋಬರಾವ್, ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ ರಾಯಚೂರು | 9341076615 | 08023345579 / 08023344676 |
| 9 | ಎನ್ | ಕೆ.ಎನ್.ನಾಗರಾಜು, ಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 9019242936 | 08023345579 / 08023344676 |

ಫ್ಯಾಕ್ಸ್ : 080–23347670
ನಿರ್ದೇಶಕರು : 080–23349434
ಕಾರ್ಯದರ್ಶಿಗಳು : 080–23445579
ಉಪನಿರ್ದೇಶಕರು(ಆಡಳಿತ) : 080–23562267

- ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ ಮಾಹಿತಿಗೆ ಸಿ–ಶಾಖೆಯ ಹಿರಿಯ ಸಹಾಯಕ ನಿರ್ದೇಶಕರು ಶ್ರೀ ಬಿ.ಹೆಚ್.ಶೇಖರಪ್ಪ ಇವರಿಗೆ ದೂರವಾಣಿ ಸಂಖ್ಯೆ: 080–23349434ಗೆ ಸಂಪರ್ಕಿಸಬಹುದು.
- ಬ್ಯಾಂಕ್ ಚಲನ್(NEFT) ಸಂಬಂಧಿಸಿದ ಮಾಹಿತಿಗೆ ಮಂಡಳಿಯ ಲೆಕ್ಕಾಧಿಕಾರಿಗಳ ದೂರವಾಣಿ ಸಂಖ್ಯೆ: 080–23561271ಗೆ ಸಂಪರ್ಕಿಸುವುದು.